**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

**ವಿಷಯ:** ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಪಿ.ಎಂ.ಎಸ್.ಎಸ್.ವೈ.)ಯ ಹೃದ್ರೋಗ ವಿಭಾಗದಲ್ಲಿರುವ ಕ್ಯಾತ್ ಲ್ಯಾಬ್ ಕಳೆದ 6 ತಿಂಗಳಿನಿಂದ ಕಾರ್ಯನಿರ್ವಹಿಸುತ್ತಿಲ್ಲ. ಇಲ್ಲಿಗೆ ಬರುವ ಬಡ ಹೃದ್ರೋಗಿಗಳಿಗೆ ಇಲ್ಲಿ ಚಿಕಿತ್ಸೆ ಸಿಗದೆ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಹಣ ನೀಡಿ ಚಿಕಿತ್ಸೆ ಪಡೆಯುವಂತಾಗಿದೆ. ಈ ರೀತಿ 9 ತಿಂಗಳಿನಿಂದ ಕ್ಯಾತ್ ಲ್ಯಾಬ್ ಕೆಟ್ಟುನಿಂತಿದ್ದರು ಇದುವರೆವಿಗೆ ದುರಸ್ತಿ ಮಾಡದೆ ಅಥವಾ ಹೊಸದಾಗಿ ಟೆಂಡರ್ ಕರೆಯದೆ ಇರಲು ಕಾರಣಗಳೇನು? ಇದರಿಂದ ಬಡರೋಗಿಗಳಿಗೆ ಮತ್ತು ಆ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಡಿ.ಎಂ. ಕಾರ್ಡಿಯಾಲಜಿ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ತೊಂದರೆಯಾಗಿರುತ್ತದೆ. ಆದ್ದರಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಪಿ.ಎಂ.ಎಸ್.ಎಸ್.ವೈ)ಯ ಹೃದ್ರೋಗ ವಿಭಾಗದಲ್ಲಿರುವ ಕ್ಯಾತ್ ಲ್ಯಾಬ್ ಕೂಡಲೇ ದುರಸ್ತಿಗೊಳಿಸಿ ಬಡ ಹೃದ್ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ.

**ಉತ್ತರ:**

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಹೃದ್ರೋಗ ಶಾಸ್ತ್ರ ವಿಭಾಗದಲ್ಲಿ ಈಗಾಗಲೇ ಲಭ್ಯವಿರುವ ಕ್ಯಾತ್‌ಲ್ಯಾಬ್ ಉಪಕರಣವನ್ನು 2009 ರಲ್ಲಿ ಬುನಾದಿಗೊಳಿಸಲಾಗಿದ್ದು, ಸುಮಾರು 14 ವರ್ಷ ಹಳೆದಾಗಿರುತ್ತದೆ. ಸದರಿ ಉಪಕರಣದ ತಯಾರಕರಾದ M/s Siemens Healthcare Private Limited ರವರು ಕ್ಯಾತ್‌ಲ್ಯಾಬ್ ಉಪಕರಣವು ಎಂಡ್ ಆಫ್ ಸಪೋರ್ಟ್ (end of Support) ಹಾಗೂ ಅದರ ಬಿಡಿಭಾಗಗಳು ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಹೃದ್ರೋಗ ಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಕ್ಯಾತ್‌ಲ್ಯಾಬ್ ಉಪಕರಣವನ್ನು ಖರೀದಿಸಲು ಪ್ರಸ್ತುತ ಕೆಟಿಪಿಪಿ ನಿಯಮಗಳನ್ವಯ ಇ-ಟೆಂಡರ್ ಆಹ್ವಾನಿಸಿ, ದಿನಾಂಕ: 24.01.2025ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ.

ಮುಂದುವರೆದು ಹಳೆಯ Siemens ಕ್ಯಾತ್‌ಲ್ಯಾಬ್ ಉಪಕರಣವನ್ನು Dismantling ಮಾಡಲಾಗಿದ್ದು, ಸ್ಥಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಮುಂದಿನ 2 ತಿಂಗಳಲ್ಲಿ ಹೊಸ ಕ್ಯಾತ್‌ಲ್ಯಾಬ್ ಉಪಕರಣವನ್ನು ಬುನಾದಿಗೊಳಿಸಲಾಗುವುದು.

**ಸಂಖ್ಯೆ:** ಎಂಇಡಿ 118 ಎಂಎಂಸಿ 2025

(ಡಾ|| ಶರಣಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು